# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್.ಉಪಲೋಕ್/ಬಿ.ಡಿ-7961/2015/ಡಿಆರ್‌ಇ-5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:18-12-2017.

## *ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ*

ವಿಷಯ: ಶ್ರೀ ಎಂ. ಮಹೇಶ್ವರಪ್ಪ ತಂದೆ ಮಹಾಲಿಂಗಪ್ಪ, ವಾಸ: ಮಠದ ಉರುಬಹಟ್ಟಿ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ ಇವರು ಸಲ್ಲಿಸಿರುವ ದೂರಿನ ಬಗ್ಗೆ.

****

ಈ ದೂರನ್ನು ಶ್ರೀ ಎಂ. ಮಹೇಶ್ವರಪ್ಪ ತಂದೆ ಮಹಾಲಿಂಗಪ್ಪ, ವಾಸ: ಮಠದ ಕುರುಬಹಟ್ಟಿ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ಇವರು ಶ್ರೀ ಸಮಿವುಲ್ಲಾ, ಕಾರ್ಯದರ್ಶಿ, ಮಠದ ಕುರುಬಹಟ್ಟಿ ಗ್ರಾಮ ಪಂಚಾಯತಿ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ ಹಾಗೂ ಪ್ರಸ್ತುತ ಗ್ರೇಡ್-2 ಕಾರ್ಯದರ್ಶಿಗಳು, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದಾಖಲಿಸಿ, ಕರ್ನಾಟಕ ಲೋಕಾಯುಕ್ತ ಅಧಿನಿಯಮದಡಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2. **ದೂರಿನ ಸಂಕ್ಷಿಪ್ತ ವಿವರ:**

ಎದುರುದಾರರು ಮಠದ ಕುರುಬಹಟ್ಟಿ ಗ್ರಾಮದ ಎ.ಆರ್. ನಗರದಲ್ಲಿ ಕಾಯ್ದಿರಿಸಲಾದ ಪಾರ್ಕ, ಶಾಲಾ ಮೈದಾನ, ರಸ್ತೆ, ರಾಜಕಾಲುವೆಗಳ ಖಾಲಿ ಜಾಗದಲ್ಲಿ ಅಕ್ರಮ ಕಟ್ಟಡ ಕಟ್ಟಲು ಅವಕಾಶ ನೀಡಿ ಭ್ರಷ್ಟಾಚಾರ ಎಸಗಿರುತ್ತಾರೆ. ಸದರಿ ನಿವೇಶನಗಳಿಗೆ ಸಂಬಂಧಪಟ್ಟಂತೆ ಡಿಮ್ಯಾಂಡ್ ರಜಿಸ್ಟರ್‌ನಲ್ಲಿ ಖಾತೆದಾರರ ಹೆಸರು ನಮೂದಿಸದೇ ಖಾಲಿ ಬಿಟ್ಟು ಅಕ್ರಮ ಬಳಕೆಗೆ ಉಪಯೋಗಿಸಿಕೊಳ್ಳಲು ಸಾಧ್ಯತೆಯಿದ್ದು, ಈ ಬಗ್ಗೆ ತನಿಖೆ ನಡೆಸಿ ಸೂಕ್ತ ಕ್ರಮವನ್ನು ಕೈಗೊಳ್ಳಲು ಕೋರಿದ್ದಾರೆ.

3. ಈ ದೂರಿನ ಮೇಲೆ ಎದುರುದಾರರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ.

(ಎ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಹಂಗಾಮಿಯಾಗಿ ನಿರ್ಮಿಸಿರುವ ಗುಡಿಸಲು/ಕಟ್ಟಡಗಳಿಗೆ ಈ ಹಿಂದೆ ಕಂದಾಯ ನಿಗದಿಪಡಿಸಿ ಕರ ವಸೂಲಿ ಮಾಡಲು ಸರ್ಕಾರದ ಪತ್ರ ದಿ:24-5-2003 ರಂತೆ ಅವಕಾಶವಿದ್ದು, ಅದರಂತೆ ಕರ ವಸೂಲಿ ಮಾಡಿರುವುದಾಗಿ ತಿಳಿಸಿ ತಮ್ಮನ್ನು ದೋಷಮುಕ್ತನನ್ನಾಗಿ ಮಾಡಲು ಕೋರಿದ್ದಾರೆ.

4. ಎದುರುದಾರರ ಆಕ್ಷೇಪಣೆಗಳ ಮೇಲೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿದೆ.

(ಎ) ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಸದರಿ ಸುತ್ತೋಲೆಯು ಸಾರ್ವಜನಿಕ ಉಪಯೋಗಕ್ಕೆ ಮೀಸಲಟ್ಟಿರುವ ಸ್ಥಳಗಳನ್ನು ಹೊರತುಪಡಿಸಿ ನಿವೇಶನ ಕಟ್ಟಡಗಳಿಗೆ ಕರ ವಿಧಿಸಲು ಹೊರಡಿಸಿರುವುದಾಗಿಯೂ, ಪ್ರಸಕ್ತ ಪ್ರಕರಣಕ್ಕೆ ಅನ್ವಯಿಸುವುದಿಲ್ಲ. ಆದ್ದರಿಂದ, ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

5. ಮೇಲ್ಕಂಡ ಸನ್ನಿವೇಶದಲ್ಲಿ ದೂರುದಾರರು, ಎದುರುದಾರರು ಉಲ್ಲೇಖಿಸಿರುವ ಸದರಿ ಸುತ್ತೋಲೆಯು ಸಾರ್ವಜನಿಕ ಉಪಯೋಗಕ್ಕೆ ಮೀಸಲಟ್ಟಿರುವ ಸ್ಥಳಗಳನ್ನು ಹೊರತುಪಡಿಸಿದ ನಿವೇಶನ ಕಟ್ಟಡಗಳಿಗೆ ಕರ ವಿಧಿಸಲು ಹೊರಡಿಸಿದ್ದಾರೆ, ಪ್ರಸ್ತುತ ಪ್ರಕರಣಕ್ಕೆ ಅನ್ವಯಿಸುವುದಿಲ್ಲ ಅಂತ ತಿಳಿಸಿದ್ದರಿಂದ, ಈ ಪ್ರಕರಣದ ಸಂಪೂರ್ಣ ತನಿಖೆಗಾಗಿ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಚಿತ್ರದುರ್ಗ ಇವರಿಗೆ ವಹಿಸಲಾಗಿತ್ತು.

6. ಅದರಂತೆ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಚಿತ್ರದುರ್ಗ ಇವರು ತನಿಖಾ ವರದಿಯನ್ನು ಸಲ್ಲಿಸಿದ್ದು, ಈ ಹಿಂದೆ ಎಂ.ಕೆ.ಹಟ್ಟಿ ಗ್ರಾಮ ಪಂಚಾಯತಿಯ ಕಾರ್ಯದರ್ಶಿ ಆಗಿದ್ದ ಶ್ರೀ ಸೈಯದ್ ಸಮಿವುಲ್ಲಾ ಇವರು ಕಾನೂನುಬಾಹಿರವಾಗಿ ದೇವಸ್ಥಾನ ಆವರಣದ ಜಾಗವನ್ನು ಖಾತೆ ನಂ:144/583 ರಲ್ಲಿ ಶ್ರೀಮತಿ ಶಕೀಲಾ ಇವರಿಗೆ ಖಾತೆ ಮಾಡಿಸಿ ಕೊಟ್ಟು, ಮನೆ ನಿರ್ಮಿಸಿಕೊಳ್ಳಲು ಅನುಮತಿಯನ್ನು ಕೊಟ್ಟಿರುವುದು ಕಂಡುಬರುತ್ತದೆ. ಸರ್ಕಾರಿ ಜಾಗದಲ್ಲಿ ಮಾಡಿರುವ ಒತ್ತುವರಿಯನ್ನು ತೆರವುಗೊಳಿಸಲು ನೋಟಿಸ್‌ಗಳನ್ನು ಒತ್ತುವರಿದಾರರಾದ ಪ್ರೇಮಕ್ಕ ಮತ್ತು ಮುರುಗೇಶಪ್ಪ ಇವರಿಗೆ ಕೊಡಲಾಗಿದೆ, ಆದರೆ ಈ ಎಲ್ಲಾ ವ್ಯಕ್ತಿಗಳ ಹಕ್ಕು ಬದಲಾವಣೆಗೆ ಸಭಾ ನಡವಳಿಗಳು, ಹಕ್ಕು ಪತ್ರ, ರಶೀದಿ, ಪರವಾನಿಗೆಗಳು ಗ್ರಾಮ ಪಂಚಾಯತಿಯಲ್ಲಿ ಲಭ್ಯವಿಲ್ಲ ಅಂತ ತಿಳಿಸಿದ್ದಾರೆ.

7. ತನಿಖಾ ವರದಿಗೆ ಎದುರುದಾರರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ.

(ಎ) ಎದುರುದಾರರು ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಿದ್ದು, ಎಂ.ಕೆ.ಹಟ್ಟಿಯ ಎಂ.ಆರ್. ನಗರದಲ್ಲಿರುವ ಡಿಮ್ಯಾಂಡ್ ರಜಿಸ್ಟರ್‌ನಲ್ಲಿ ನಮೂದು ಆಗಿರುವ ಎಲ್ಲಾ ಕ್ರಮ ಸಂಖ್ಯೆಗಳ ವಿವರಗಳನ್ನು ಸಭೆಯಲ್ಲಿ ನಿರ್ಣಯಿಸಿದ್ದು ಸಭಾ ನಡವಳಿಕೆಯ ಝುರಾಕ್ಸ್ ನಕಲುಗಳನ್ನು ದೃಢೀಕರಿಸಿ ಸಲ್ಲಿಸಲಾಗಿದೆ. ಈಗ ನಾನು ಅಮಾನತ್ತಿನಲ್ಲಿದ್ದೇನೆ ಅಂತ ತಿಳಿಸಿದ್ದಾರೆ.

8. ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದಾಗ, ತನಿಖಾಧಿಕಾರಿಗಳು ಸಲ್ಲಿಸಿರುವ ವರದಿಯಲ್ಲಿ ಶ್ರೀಮತಿ ಪ್ರೇಮಕ್ಕ ಕೋಂ ರಾಮಪ್ಪ ಜಂಟಿ ಎಸ್.ಆರ್. ಕರಿಯಪ್ಪ ರವರು ತಮ್ಮ ಮನೆಯ ಹಿಂಭಾಗದಲ್ಲಿ ಪಶ್ಚಿಮ ಭಾಗಕ್ಕೆ ಶಾಲಾ ಆವರಣ ಒತ್ತುವರಿ ಮಾಡಿಕೊಂಡಿದ್ದಾರೆ. ಡಬ್ಬ ಅಂಗಡಿಯ ಮುರುಗೇಶಪ್ಪ ಇವರು ಸರ್ಕಾರಿ ಶಾಲೆಯ ಜಾಗದಲ್ಲಿ ಒತ್ತುವರಿ ಮಾಡಿ ಶಾಲಾ ಕಂಪೌಂಡ ಅನ್ನು ಒತ್ತುವರಿ ಮಾಡಿಕೊಂಡು ಅಂಗಡಿಯನ್ನು ಇಟ್ಟಿದ್ದಾರೆ.

9. ಶ್ರೀಮತಿ ಶಕೀಲಾ ರವರು ದೇವಸ್ಥಾನದ ಆವರಣದ ಜಾಗವನ್ನು ಎದುರುದಾರರಿಂದ ಖಾತೆ ಮಾಡಿಸಿಕೊಂಡಿದ್ದಾರೆ ಮತ್ತು ಮನೆ ನಿರ್ಮಾಣ ಮಾಡಲು ಪರವಾನಿಗೆಯನ್ನು ಪಡೆದುಕೊಂಡಿದ್ದಾರೆ. ಅತಿಕ್ರಮಣ ತೆರವುಗೊಳಿಸಲು ನೋಟಿಸ್ ಕೊಡಲಾಗಿದೆ. ಕಾನೂನುಬಾಹಿರವಾಗಿ ಎದುರುದಾರರು ಶ್ರೀಮತಿ ಶಕೀಲಾ ರವರಿಗೆ ಖಾತೆ ಮಾಡಿಸಿಕೊಟ್ಟಿದ್ದಾರೆ. ಈ ಬಗ್ಗೆ ಸಭಾ ನಡವಳಿಗಳು, ಹಕ್ಕುಪತ್ರ, ರಶೀದಿ ಅಥವಾ ಪರವಾನಿಗೆಗಳು ಎಂ.ಕೆ.ಹಟ್ಟಿ ಗ್ರಾಮ ಪಂಚಾಯತಿಯಲ್ಲಿ ಲಭ್ಯವಿಲ್ಲ ಅಂತ ಸ್ಪಷ್ಟವಾದ ವರದಿಯನ್ನು ಕೊಟ್ಟಿದ್ದಾರೆ.

10. ಈಗ ಎದುರುದಾರರು ಪಂಚಾಯತಿಯ ಸಭಾ ನಡವಳಿಗಳು ಇವೆ ಅಂತ 2 ಪಂಚಾಯತಿ ನಡವಳಿಯ ದೃಢೀಕೃತ ನಕಲುಗಳನ್ನು ಸಲ್ಲಿಸಿದ್ದಾರೆ. ಸದರಿ ನಡವಳಿಗಳಿಗೆ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಮಾತ್ರ ಸಹಿಯನ್ನು ಮಾಡಿದ್ದಾರೆ.

11. ದಿನಾಂಕ: 25-11-2010 ರ ಸಭಾ ನಡವಳಿ ತುರ್ತು ಸಭೆಯಲ್ಲಿ ಆಗಿದೆ. ದಿನಾಂಕ: 30-1-2012 ರ 2ನೇ ನಡುವಳಿಯು ಸಾಮಾನ್ಯ ಸಭೆಯ ನಡವಳಿಯಾಗಿದೆ. ಕಾರ್ಯದರ್ಶಿಗಳು ಸಭೆಗೆ ಶ್ರೀಮತಿ ಶಕೀಲಾ ಬಾನು ರವರ ಕರ ಆಕರಣೆಯ ವಿಷಯದ ಅರ್ಜಿ ಓದಿ ತೋರಿಸಿದಾಗ, ಇದು ದೇವಸ್ಥಾನದ ಜಾಗ ಅಂತ ಸಭೆಗೆ ತಿಳಿಸಿಲ್ಲ. ಅದೇ ಸ್ಥಳದಲ್ಲಿ ಮನೆ ಕಟ್ಟಿಸಲು ಅರ್ಜಿಯನ್ನು ಸಲ್ಲಿಸಿದಾಗಲೂ ಸಹ ಸಭೆಗೆ ಇದು ದೇವಸ್ಥಾನದ ಜಾಗ ಅಂತ ಎದುರುದಾರರು ತಿಳಿಸಿಲ್ಲ. ಹಾಗೊಂದು ವೇಳೆ ಸಭೆಗೆ ವಿಷಯವನ್ನು ತಿಳಿಸಿದ ನಂತರವೂ ಸಹ ಎಲ್ಲಾ ಸದಸ್ಯರು ಒಪ್ಪಿಕೊಂಡಲ್ಲಿ ಕಾರ್ಯದರ್ಶಿಗಳ ಜವಾಬ್ದಾರಿ ಇರುವುದಿಲ್ಲ. ಆದರೆ ಎದುರುದಾರರು ಯಾವುದೇ ವಿಷಯವನ್ನು ಸಭೆಗೆ ತಿಳಿಸದೇ ಕೇವಲ ಖಾತೆ ಮಂಜೂರು ಪ್ರಕರಣ ಅಂತ ತಿಳಿಸಿ ಸಭಾ ನಡವಳಿ ಅನುಮೋದಿಸಿಕೊಂಡಿದ್ದಾರೆ.

12. ಎಂ.ಕೆ.ಹಟ್ಟಿ ಗ್ರಾಮದಲ್ಲಿ ಮಾಡಿರುವ ಸರ್ಕಾರಿ ಶಾಲಾ ಕಂಪೌಂಡ ಒತ್ತುವರಿ, ಸರ್ಕಾರಿ ಜಾಗದ ಒತ್ತುವರಿ ತೆರವುಗೊಳಿಸುವಲ್ಲಿ ಎದುರುದಾರರು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ.

ತನಿಖಾಧಿಕಾರಿಗಳು ಎಂ.ಕೆ.ಹಟ್ಟಿ ಗ್ರಾಮ ಪಂಚಾಯತಿಗೆ ಭೇಟಿ ಕೊಟ್ಟಾಗ ಇಲ್ಲದೇ ಇದ್ದ ಸಭಾ ನಡವಳಿಗಳು ಎದುರುದಾರರು ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸುವಾಗ ಎಲ್ಲಿಂದ ಬಂದವು ಅಂತ ಅನುಮಾನಸ್ಪದವಾಗಿದೆ.

13. ಆದ್ದರಿಂದ ಎಂ.ಕೆ.ಹಟ್ಟಿ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿರುವ ಸರ್ಕಾರಿ ಶಾಲಾ ಕಂಪೌಂಡ ಒತ್ತುವರಿ, ಸರ್ಕಾರಿ ಜಾಗದ ಒತ್ತುವರಿ ಮತ್ತು ಅನಧಿಕೃತ ಖಾತಾ ಆಗಿರುವ ದೇವಸ್ಥಾನ ಆವರಣದ ಜಾಗವನ್ನು ಸಂ:144/583 ರಲ್ಲಿ ಶ್ರೀಮತಿ ಶಕೀಲಾ ಬಾನು ಇವರಿಗೆ ಮಾಡಿಕೊಟ್ಟ ಅಕ್ರಮ ಖಾತೆಯನ್ನು ರದ್ದುಗೊಳಿಸಿ ಸೂಕ್ತ ಕಾನೂನಿನ ಪ್ರಕಾರ ಕ್ರಮವನ್ನು ತೆಗೆದುಕೊಳ್ಳುವಂತೆ ಎದುರುದಾರರ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮ ಕಲಂ 12(1) ಅಡಿಯಲ್ಲಿ ಶಿಪಾರಸ್ಸು ಮಾಡಲಾಗಿದೆ.

14. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

18/12/17.

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ